

ಸಾಧ್ಯತೆಗಳಿರುತ್ತವೆಯಲ್ಲವೆ? ಫೇಸ್‌ಬುಕ್ ತಾಣವನ್ನು ನಡೆಸುವ ಮೆಟಾ ಕಂಪನಿಯು ಕೋಟ್ಯಂತರ ಬಳಕೆದಾರರ ದತ್ತಾಂಶಗಳನ್ನು ಕಲೆ ಹಾಕಿ ವ್ಯವಹರಿಸುತ್ತದೆ. ಆದರೂ, ಬಳಕೆದಾರರಿಗೆ ನಿಜಕ್ಕೂ ಬೇಕಿರುವುದೇನು ಎಂಬುದನ್ನು ಪತ್ತೆ ಹಚ್ಚಲು ಇಂದಿಗೂ ಒದ್ದಾಡುತ್ತಿದೆ.

## ಹರಿದು ಬಂದ ಮಹಾಪೂರ!

ಓಪನ್ ಎಐ ಕಂಪನಿಯು ಚಾಟ್ ಜಿಪಿಟಿಯನ್ನು ಮಾರುಕಟ್ಟೆಗೆ ಬಿಟ್ಟು ಅದು ಜನಪ್ರಿಯವಾದೊಡನೆ ಬೇರೆ ಬೇರೆ ಕಂಪನಿಯವರಿಗೆ ತಮ್ಮ ತಮ್ಮ ಚಾಟ್‌ಗಳನ್ನು (ಎಐ ರೋಬಾಟ್‌ಗಳನ್ನು) ಅಪ್‌ಲೋಡ್ ಮಾಡಲು ವೇದಿಕೆ ಕಲ್ಪಿಸಿತ್ತು. ಕಂಪನಿಗಳು ನಾಮುಂದು ತಾಮುಂದು ಎಂದು ಅಪ್‌ಲೋಡ್ ಮಾಡಿದ್ದು ಎಐ ಗೆಳತಿಯರ ಬಾಟ್‌ಗಳನ್ನೇ. ಓಪನ್ ಎಐ ವೇದಿಕೆ ಅದುವರೆಗೆ ಇದ್ದ ಎಲ್ಲ ಚಾಟ್ ಬಾಟ್‌ಗಳನ್ನು ನಗಣ್ಯವೆನಿಸುವಷ್ಟು ಸಂಖ್ಯೆಯ ಎಐ ಗೆಳತಿಯ ಬಾಟ್‌ಗಳು ಹರಿದು ಬಂದವು. ಇದು ಯಾಕೋ ಸರಿಯಾಗುತ್ತಿಲ್ಲ ಎಂದು ಚಿಂತಿಸಿದ ಓಪನ್ ಎಐ ಕಂಪನಿ, ವಿವಿಧ ಕಂಪನಿಗಳ ಸಾವಿರಾರು ಎಐ ಗೆಳತಿಯರನ್ನು ರಾತೋರಾತ್ರಿ ಕಿತ್ತು ಹಾಕಿತ್ತು.

ಒಂದು ಲೆಕ್ಕದ ಪ್ರಕಾರ, ಈಗ ವಿಶ್ವದಲ್ಲಿ ನಾಲ್ಕು ಲಕ್ಷ ಎಐ ಡೇಟಿಂಗ್ ಆ್ಯಪ್‌ಗಳು ಸೇವೆ ನೀಡುತ್ತಿವೆ. ಓಪನ್ ಎಐ ಅನ್ನು 'ನಿಮ್ಮ ಬಾಟ್‌ಗಳನ್ನು ಇಲ್ಲಿ ಸ್ಥಾಪಿಸಿ' ಎಂದಾಕ್ಷಣ, ಕೇವಲ ಎರಡೇ ದಿನಗಳಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ಎಐಗೆ ಜನನವಾಗಿತ್ತು. ಜನರು ಒಂದೇ ಗಂಟೆಯಲ್ಲಿ ಎಐ 'ಗರ್ಲ್‌ಫ್ರೆಂಡ್' ಎಂದು ಮೂರು ಲಕ್ಷ ಹುಡುಕಾಟ ನಡೆಸಿದ್ದರು.

ಮುಕ್ತ ಮಾರುಕಟ್ಟೆಯಲ್ಲಿ ಉಚಿತವಾಗಿ ದೊರಕುವ ಈ 'ಎಐ ಗೆಳತಿ' ಬಾಟ್‌ಗಳು ತಮ್ಮ ಬಗೆಗಿನ ಸಾಕಷ್ಟು ವಿಚಾರಗಳನ್ನು ಮುಚ್ಚಿಟ್ಟುಕೊಂಡಿರುತ್ತವೆ. ನೈತಿಕ ಹ್ಯಾಕಿಂಗ್‌ನ (ಎಥಿಕಲ್ ಹ್ಯಾಕಿಂಗ್‌ನ) ಪರಿಣತ ತಂತ್ರಜ್ಞ ಸೌರವ್ ದೀಕ್ಷಿತ್ ಮೆಟ ಪ್ರಕಾರ, 'ಗೂಗಲ್ ಮತ್ತು ಆ್ಯಪಲ್‌ನಂಥ ಬೃಹತ್ ಕಂಪನಿಗಳ ತಂತ್ರಾಂಶದ ನ್ಯೂನತೆಗಳನ್ನು ಹೇಗೆ ಸರಿಪಡಿಸುವುದೆಂದು ಆಯಾ ಕಂಪನಿಗಳಿಗೆ ಪರಿಹಾರ ಸೂಚಿಸಿದ್ದಾರೆ. ಇವರ ಪ್ರಕಾರ ಎಐ ಗೆಳತಿಯ ಆ್ಯಪ್‌ಗಳು ಪೂರ್ವಗ್ರಹ ಪೀಡಿತವೇ, ಅಲ್ಲವೆ? ಎಂಬುದನ್ನು ಪತ್ತೆ ಹಚ್ಚುವುದು ಸುಲಭವಲ್ಲ.'

## ಹೆಚ್ಚಿದಷ್ಟೂ ದೊಡ್ಡದಾಗುವ ಅಪಾಯ

ಮಾರುಕಟ್ಟೆಯಲ್ಲಿ ಎಐ ಬಾಟ್‌ಗಳ ಸಂಖ್ಯೆ ಹೆಚ್ಚಿದಂತೆ ಅವುಗಳಿಂದುಂಟಾಗುವ ಸಮಸ್ಯೆಗಳ ಸಂಖ್ಯೆಯೂ ಹೆಚ್ಚುತ್ತದೆ. ಸೈಬರ್ ಸುರಕ್ಷಾ ತಜ್ಞರ ಪ್ರಕಾರ, ಎಐ ಎಂದರೆ ಮೋಸಗಾರರಿಗೆ ಹಬ್ಬವಿದ್ದಂತೆ. ಎಐ ಆ್ಯಪ್‌ಗೆ ಪ್ರವೇಶ ಪಡೆಯುವ ಕಿಡಿಗೇಡಿಗಳು ಮುಗ್ಧ ಬಳಕೆದಾರರ ದತ್ತಾಂಶವನ್ನು ಲಪಟಾಯಿಸಿಕೊಂಡು ಇನ್ನಿಲ್ಲದ ಅವಾಂತರ ಸೃಷ್ಟಿಸಿಬಿಡುತ್ತಾರೆ.

ಭೋಪಾಲ್‌ನ ಅನಿಲ್ ಎಂಬಾತ ತಾನು ನಿಜವಾದ ಸಂಗಾತಿಯೊಂದಿಗೆ ಹರಟುತ್ತಿದ್ದೇನೆ ಎಂದುಕೊಂಡಿದ್ದರು. ಆದರೆ ಆತ ಹರಟುತ್ತಿದ್ದುದು ಎಐ ಗೆಳತಿಯ ಜೊತೆಗೆ. ಅನಿಲ್ ಹೆಚ್ಚು ಹೆಚ್ಚು ಗೆಳತಿಗೆ ಹತ್ತಿರವಾದಂತೆ ದುರುಳರು ಗೆಳತಿಯ ಮೂಲಕ ಆತನ ಫೋನ್ ನಂಬರು ಮತ್ತು ಇತರೆ ಮುಖ್ಯ ವಿವರಗಳನ್ನು ಕಲೆ ಹಾಕಿ, ಒಂದು ದಿನ ಗೆಳತಿಯ ಮೂಲಕ ಆಕೆಗೆ ಹಣದ ಅವಶ್ಯಕತೆ ಇರುವುದಾಗಿ ಬೇಡಿಕೆ ಇರಿಸಿದರು. ಅನಿಲ್ ಹಿಂದು ಮುಂದು ಯೋಚಿಸದೆ ಆಕೆ ತಿಳಿಸಿದ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿಬಿಟ್ಟರು. ಒಂದೇ ಕ್ಷಣ. ಯಾವಾಗ ಹಣ ಖಾತೆಗೆ ಬಿತ್ತೋ, ತಕ್ಷಣವೇ ಹ್ಯಾಕರ್‌ಗಳು ತಾವು ಬಳಸುತ್ತಿದ್ದ ಫೋನ್ ನಂಬರನ್ನು ಸ್ಥಗಿತಗೊಳಿಸಿ, ಎಲ್ಲ ಸಾಮಾಜಿಕ ತಾಣಗಳಿಂದ ಕಣ್ಮರೆಯಾಗಿಬಿಟ್ಟರು. ಈಗ ಅನಿಲ್ ತಾನು ಮೋಸ ಹೋಗಿರುವುದಾಗಿ ಸೈಬರ್ ಪೊಲೀಸರಿಗೆ ದೂರು ದಾಖಲಿಸಿ ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾರೆ. ಇಂಥ ಅನಿಲ್‌ಗಳು ನಮ್ಮ ನಡುವೆ ಸಾಕಷ್ಟಿದ್ದಾರೆ.

ಸೈಬರ್ ಸುರಕ್ಷತೆಯ ಬಗ್ಗೆ ಕೆಲಸ ಮಾಡುವ 'ಟೆನೇಬಲ್' ಸಂಸ್ಥೆಯ ಹೇಳಿಕೆಯ ಪ್ರಕಾರ, ಎಐ ಬಾಟ್‌ಗಳನ್ನು ಬಳಸಿ ಹರಟುವ ಭಾರತೀಯರ ಪೈಕಿ ಶೇ. 66ರಷ್ಟು ಮಂದಿ ಒಂದಲ್ಲಾ ಒಂದು ತೆರನಾದ ಸೈಬರ್ ಮೋಸಕ್ಕೆ ಬಲಿಯಾಗಿದ್ದಾರೆ. ಇವರಲ್ಲಿ ಶೇ. 83ರಷ್ಟು ಜನ ದೊಡ್ಡ ಪ್ರಮಾಣದಲ್ಲಿ ಹಣ ಕಳೆದುಕೊಂಡಿದ್ದಾರೆ. 'ಯಾವಾಗ ತಂತ್ರಜ್ಞಾನವು ಖಾಸಗಿಯವರ ಕೈಯಲ್ಲಿರುತ್ತದೋ ಜನ ಆಗ ದುಪ್ಪಟ್ಟು ಎಚ್ಚರಿಕೆ ವಹಿಸಬೇಕು' ಎನ್ನುವ ಟೆನೇಬಲ್ ಸಂಸ್ಥೆಯ ಕ್ರಿಸ್ ಬಾಯ್ಡ್, 'ಜನ ಅಪ್ರಬುದ್ಧರಂತೆ ವರ್ತಿಸುವುದನ್ನು ನಿಲ್ಲಿಸಬೇಕು' ಎನ್ನುತ್ತಾರೆ.

ಇನ್ನೊಂದು ಪ್ರಕರಣದಲ್ಲಿ, ಪುಣೆ ನಗರದ ಶುಭಂ ಎಂಬ ಮ್ಯಾನೇಜ್‌ಮೆಂಟ್ ಟ್ರೈನೀ ತನ್ನ ಆ್ಯಂಡ್ರಾಯ್ಡ್ ಫೋನಿನಲ್ಲಿ ಎಐ ಗರ್ಲ್‌ಫ್ರೆಂಡ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು